**ಎಸ್.ಸಿ. 36/2014**

**ದೋ.ಸಾ. : 57 ಪ್ರಾ.ಸಾ. :44**

ಸಾಕ್ಷಿಯ ಹೆಸರು : ಅರುಣ್ ಕುಮಾರ್ ಕೊಳೂರ

**ದಿನಾಂಕಃ 27-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-**

14. ದಿ.17-02-2014 ರಂದು ಆರೋಪಿಯ ಪತ್ತೆಯ ಕುರಿತು ಸಿಬ್ಬಂದಿಯಾದ ಸಿ.ಹೆಚ್.ಸಿ-362 ಮತ್ತು ಸಿ.ಪಿ.ಸಿ-1642, ಸಿ.ಪಿ.ಸಿ-593 ರವರನ್ನು ನೇಮಿಸಿ ಕಳುಹಿಸಿರುತ್ತೇನೆ ಹಾಗೂ ನಾನು ಮತ್ತು ಸಿ.ಹೆಚ್.ಸಿ-1173/ಚಾಸಾ-55, ಸಿ.ಪಿ.ಸಿ-954 ಮತ್ತು ಎ.ಎಸ್.ಐ ಪಾವಸ್ಕರ್ ರವರು ಆರೋಪಿಯ ಪತ್ತೆಯ ಕುರಿತು ಹೋಗಿರುತ್ತೇವೆ. ಅದೇ ದಿನ ರಾತ್ರಿ 10.00 ಗಂಟೆಗೆ ಕದ್ರಾದ ಚರ್ಚ್ ವಾಡದಲ್ಲಿ ಆರೋಪಿಯ ಪತ್ತೆಯಾಗಿದ್ದು, ಆತನನ್ನು ಠಾಣೆಗೆ ಕರೆದುಕೊಂಡು ಬಂದು, ವಿಚಾರಣೆಗೊಳಪಡಿಸಿ ದಿ.18-02-2014 ರಂದು ಬೆಳಿಗ್ಗೆ 7.15 ಗಂಟೆಗೆ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಆರೋಪಿಯ ದಸ್ತಗಿರಿ ವಿಷಯ ಗೊತ್ತಾಗಿ, ಸ್ಥಳೀಯರು ಠಾಣೆಗೆ ಬಂದಿರುತ್ತಾರೆ. ನಂತರ ಆರೋಪಿಯ ಸ್ವ-ಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಆರೋಪಿಯು ತನ್ನ ಸ್ವ-ಖುಷಿ ಹೇಳಿಕೆಯಲ್ಲಿ "ಮೃತ ವೇಲು 2 ತಿಂಗಳ ಹಿಂದೆ ಪರಿಚಯವಾಗಿದ್ದು, ಆತನ ಮುಖಾಂತರ ಆರೋಪಿಯು ತಾಯಿ ಓ.ಸಿ. ನಂಬರುಗಳನ್ನು ಹಾಕುತ್ತಿದ್ದೆ ಹಾಗೂ ಬೇರೆಯವರಿಂದಲೂ ಸಹ ಹಣ ಸಂಗ್ರಹಣೆ ಮಾಡಿ, ವೇಲುವಿನ ಬಳಿ ಓ.ಸಿ. ನಂಬರುಗಳನ್ನು ಹಾಕುತ್ತಿದ್ದೆನು, ಆದರೆ ವೇಲು ಒಂದು ತಿಂಗಳಿನಿಂದ ಓ.ಸಿ. ನಂಬರುಗಳನ್ನು ಹಾಕಿಸಿಕೊಳ್ಳುವುದನ್ನು ಬಿಟ್ಟಿದ್ದನು, ಆದ್ದರಿಂದ ನನ್ನ ಖರ್ಚಿಗೆ ಹಣದ ಕೊರತೆಯಾದ್ದರಿಂದ ವೇಲುವಿನ ಮನೆಯಿಂದ ರೂ.45,000/- ಹಣವನ್ನು ಕಳ್ಳತನ ಮಾಡಿದ್ದೆನು, ಆದ್ದರಿಂದ ವೇಲು ದೇವರಿಗೆ ಹರಕೆ ಮಾಡಿಕೊಂಡಿದ್ದ ವಿಷಯ ನನಗೆ ಗೊತ್ತಾಗಿ, ಕಳ್ಳತನ ಮಾಡಿದ ಹಣದಲ್ಲಿ ಸ್ವಲ್ಪ ಹಣವನ್ನು ಖರ್ಚು ಮಾಡಿದ್ದರಿಂದ, ಉಳಿದ ಹಣವಾದ ರೂ.37,000/- ಗಳನ್ನು ವೇಲುವಿನ ಮನೆಯ ಬಾಗಿಲಿನಲ್ಲಿ ಇಟ್ಟು ಬಂದಿರುತ್ತೇನೆ, ಸದರಿ ಹಣವನ್ನು ನಾನೇ ಇಟ್ಟಿರುತ್ತೇನೆ ಎಂದು ಗೊತ್ತಾಗಿ, ವೇಲು ನನಗೆ ಉಳಿದ ಹಣವನ್ನು ಕೊಡು, ಇಲ್ಲದಿದ್ದರೆ ನಿನ್ನ ವಿರುದ್ಧ ಠಾಣೆಯಲ್ಲಿ ದೂರು ನೀಡುತ್ತೇನೆ ಅಥವಾ ಕೇರಿಯ

ಯಾವುದಾದರೂ ಹೆಣ್ಣುಮಕ್ಕಳನ್ನು ನನ್ನ ಬಳಿ ಕಳುಹಿಸಿಕೊಡು ಎಂದು ಹೇಳಿದ್ದನು, ಆನಂತರ ದಿ.13-02-2014 ರಂದು ರಾತ್ರಿ ಮನೆಯ ಕಡೆಗೆ ಬರುವಂತೆ ಫೋನು ಮಾಡಿ ಹೇಳಿರುತ್ತಾನೆ, ಅದರಂತೆ ನಾನು ವೇಲುವಿನ ಮನೆಯ ಬಳಿ ಹೋದಾಗ, ಹಣದ ವಿಷಯವಾಗಿ ವೇಲು ನನ್ನ ಬಳಿ ಜಗಳ ಮಾಡಿರುತ್ತಾನೆ ಹಾಗೂ ಕೇರಿಯ ಹೆಣ್ಣುಮಕ್ಕಳು ಇಲ್ಲದಿದ್ದರೆ, ನಿನ್ನ ತಾಯಿಯನ್ನು ಕಳುಹಿಸಿಕೊಡು ಎಂದು ಹೇಳಿರುತ್ತಾನೆ, ಇದರಿಂದ ನನ್ನ ಮನಸ್ಸಿಗೆ ಬೇಜರಾಗಿದ್ದು, ಆದ್ದರಿಂದ ಆತನಿಗೆ ಏನಾದರೂ ಮಾಡಬೇಕೆಂದು ವಿಚಾರ ಮಾಡಿರುತ್ತೇನೆ, ಆನಂತರ ದಿ.14-02-2014 ರಂದು ಸಂಜೆ 7.30 ಗಂಟೆಯ ಸಮಯದಲ್ಲಿ ವೇಲು ಪುನಃ ನನಗೆ ಕರೆ ಮಾಡಿ, ಹಣ ಕೊಡುವಂತೆ ಬೆದರಿಕೆ ಒಡ್ಡಿರುತ್ತಾನೆ, ಆದ್ದರಿಂದ ಆತನಿಗೆ ಏನಾದರೂ ಮಾಡಬೇಕು ಹಾಗೂ ಆತನಿಗೆ ಒಂದು ಗತಿ ಕಾಣಿಸಬೇಕು ಎಂದು ತೀರ್ಮಾನಿಸಿ, ಮನೆಯಲ್ಲಿದ್ದ ಒಂದು ಕತ್ತಿಯನ್ನು ಮುಚ್ಚಿಟ್ಟುಕೊಂಡು ಮನೆಯ ಹತ್ತಿರದ ಜಂಗಲ್ ರಸ್ತೆಗೆ ಹೋಗಿ, ಕತ್ತಿಯನ್ನು ಅಲ್ಲಿ ಮುಚ್ಚಿಟ್ಟು, ನಂತರ ವೇಲುವಿನ ಮನೆಯ ಬಳಿ ಹೋಗಿ ರಾತ್ರಿ 9.30 ಗಂಟೆಯ ಸುಮಾರಿಗೆ ವೇಲುವಿಗೆ ಕರೆ ಮಾಡಿ, ಹಣ ಕೊಡುತ್ತೇನೆ ಹೊರಗೆ ಬಾ ಎಂದು ಹೇಳಿರುತ್ತೇನೆ, ನಂತರ ವೇಲು ಮತ್ತು ಆತನ ಮಗ ಮನೆಯಿಂದ ಹೊರಗೆ ಬಂದಿದ್ದು, ಆ ಸಮಯದಲ್ಲಿ ವೇಲುವಿನ ಹೆಂಡತಿಯಾದ ಜಾನಕಿ ಮತ್ತು ಮಗಳಾದ ಅಶ್ವಿನಿಯು ನನ್ನನ್ನು ನೋಡಿರುತ್ತಾರೆ, ನಂತರ ನಾನು ವೇಲುವನ್ನು ಕತ್ತಿಯನ್ನು ಮುಚ್ಚಿಟ್ಟ ಸ್ಥಳವಾದ ಜಂಗಲ್ ರಸ್ತೆಗೆ ಕರೆದುಕೊಂಡು ಹೋಗಿರುತ್ತೇನೆ, ಆತನೊಂದಿಗೆ ಅವನ ಮಗನಾದ ಸತ್ಯನಾರಾಯಣ ಮೂರ್ತಿ ಯಾನೆ ಪುಟ್ಟನೂ ಸಹ  ಬಂದಿರುತ್ತಾನೆ, ನಂತರ ನಾನು ಅವರನ್ನು ಕತ್ತಿ ಮುಚ್ಚಿಟ್ಟ ಸ್ಥಳಕ್ಕೆ ಕರೆದುಕೊಂಡು ಹೋಗಿ, ಅಲ್ಲಿ ಈಗಾಗಲೇ ಮುಚ್ಚಿಟ್ಟ ಕತ್ತಿಯನ್ನು ತೆಗೆದುಕೊಂಡು ವೇಲುವಿನ ಕುತ್ತಿಗೆಗೆ ಮತ್ತು ತಲೆಗೆ ಹೊಡೆದು ಸಾಯಿಸಿರುತ್ತೇನೆ, ಆಗ ಆತನ ಮಗ ಕೂಗಿಕೊಂಡು ಅಲ್ಲಿಂದ ಮನೆಯ ಕಡೆಗೆ ಓಡಿ ಹೋಗುತ್ತಿದ್ದನು, ನಂತರ ನಾನು ಆತನನ್ನೂ ಸಹ ಬೆನ್ನಟ್ಟಿ ಅದೇ ಕತ್ತಿಯಿಂದ ಅವನ ಕುತ್ತಿಗೆಗೂ ಸಹ ಹೊಡೆದು ಅವನನ್ನೂ ಸಾಯಿಸಿರುತ್ತೇನೆ, ನಂತರ ನಾನು ವೇಲುವಿನ ಮನೆಯ ಬಳಿಗೆ ಹೋಗಿ, ಅವರ ಮನೆಯ ವಿದ್ಯುತ್ ಸಂಪರ್ಕದ ವಯರನ್ನು ಕತ್ತಿಯಿಂದ ಕಟ್ ಮಾಡಿರುತ್ತೇನೆ, ನಂತರ ಅವರ ಮನೆಯ ಬಾಗಿಲು ಬಡಿದಿರುತ್ತೇನೆ, ಆಗ ಜಾನಕಿಯು ಬಾಗಿಲು ತೆಗೆದಿದ್ದು, ನಾನು ಜಾನಕಿಗೆ ಅವರ ಮಗಳಾದ ಅಶ್ವಿನಿಯನ್ನು ನನ್ನೊಂದಿಗೆ ಕಳುಹಿಸಿಕೊಡುವಂತೆ ಹೇಳಿರುತ್ತೇನೆ, ಆಗ ಜಾನಕಿಯು ಆಕೆಯು ಈಗ ಮಲಗಿಕೊಳ್ಳುತ್ತಾಳೆ ಮತ್ತು ಆಕೆಯನ್ನು ನಾನು ಈಗ ಕಳುಹಿಸುವುದಿಲ್ಲ ಎಂದು ಹೇಳಿದ್ದು,

ಸಿಟ್ಟಿನಿಂದ ನಾನು ಅದೇ ಕತ್ತಿಯಿಂದ ಜಾನಕಿಯ ಕುತ್ತಿಗೆಗೆ ಹೊಡೆದಿರುತ್ತೇನೆ, ಆಗ ಅವಳು ಅಲ್ಲಿಯೇ ಕುಸಿದು ಬಿದ್ದಿದ್ದು, ನಾನು ಆಕೆ ಸತ್ತಿರಬಹುದು ಎಂದು ತಿಳಿದುಕೊಂಡೆನು, ಆಗ ಮನೆಯಲ್ಲಿದ್ದ ಅಶ್ವಿನಿಯು ಕೂಗಿಕೊಂಡಿದ್ದು, ಆಕೆಗೂ ಸಹ ಕತ್ತಿಯಿಂದ ಕುತ್ತಿಗೆಗೆ ಹೊಡೆದಿರುತ್ತೇನೆ" ಎಂದು ಹೇಳಿರುತ್ತಾನೆ.

(ನ್ಯಾಯಾಲಯದ ಅವಧಿ ಮುಗಿದಿದ್ದರಿಂದ, ಮುಂದುವರೆದ ಮುಖ್ಯ ವಿಚಾರಣೆಗೆ ಹಾಗೂ ಪಾಟೀ ಸವಾಲಿಗೆ ಕಾಲಾವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ.